**ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ**

**ಸಿಸಿ ನಂ. 1957/2020**

| | | | |
|---|---|---|---|
| ಹೆಸರು | : | ಮಂಗಲಾ | ಚಾ.ಸಾ.4 |
| ಗಂಡನ ಹೆಸರು | : | ಅರ್ಜುನ | ಪ್ರಾ.ಸಾ.2 |
| ವಯಸ್ಸು | : | 35 ವರ್ಷ | ದಿನಾಂಕಃ 05-04-2024 |
| ಉದ್ಯೋಗ | : | ಕೂಲಿ ಕೆಲಸ | |
| ವಾಸಸ್ಥಳ | : | ಹೂವಿನ ಬಾವಿ | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ**

ಆರೋಪಿತರು ನನ್ನ ಸಂಬಂಧಿಕರು. ಪ್ರಾಸಾ-1 ರವರ ಹತ್ತಿರ ನಾನು ಕೆಲಸ ಮಾಡುತ್ತೇನೆ. ಚಾಸಾ-7 ರವರು ನನಗೆ ಗೊತ್ತು.

ಚಾಸಾ-7 ರವರು ಪ್ರಾಸಾ-1 ರವರ ಹೊಲದ ಪಾಲುಗಾರರಿದ್ದು ನನಗೆ ಕೆಲಸಕ್ಕೆ ಕರೆದಾಗ ಹೊಗುತ್ತಿದ್ದೆ. ನಾನು ಕೆಲಸಕ್ಕೆ ಹೋಗುವ ಕಾರಣ ಆರೋಪಿತರು ಪ್ರಾಸಾ-1 ರವರ ಜೊತೆ ದಿನಾಂಕ 21-09-2020 ರಂದು ಜಗಳ ಮಾಡಿರುತ್ತಾರೆ. ನನಗೆ 22-09-2020 ರಂದು ಚಾಸಾ-7 ರವರು ಜಗಳದ ಬಗ್ಗೆ ನನಗೆ ತಿಳಿಸಿದ್ದಾರೆ.

ಚಾಸಾ-7 ರವರು ನನಗೆ ತಿಳಿಸಿದ್ದು ಏನೆಂದರೆ ನಾನು ಪ್ರಾಸಾ-1 ರವರ ಜೊತೆ ಸಂಬಂಧ ಬೆಳೆಸಿದ್ದೇನೆ ಎಂದು ಜಗಳ ಮಾಡಿದ್ದಾರೆ ಎಂದು ತಿಳಿಸಿದ್ದಾರೆ. ಚಾಸಾ-7 ರವರು ನನಗೆ ತಿಳಿಸಿದ್ದು ಏನೆಂದರೆ 1 ನೇ ಆರೋಪಿ ಮತ್ತು ಪ್ರಾಸಾ-1 ರವರು ಪರಸ್ಪರವಾಗಿ ಬೈದಾಡಿಕೊಂಡಿದ್ದಾರೆ.

(ಈ ಹಂತದಲ್ಲಿ ತನಿಖಾಧಿಕಾರಿಯವರ ಮುಂದೆ ಸಲ್ಲಿಸಿರುವ ಹೇಳಿಕೆಗೆ ಈ ಸಾಕ್ಷಿ ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿಯುತ್ತಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೊಡುವಂತೆ ಸ.ಸ.ಅ.ರವರು ಅನುಮತಿ ಕೋರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ-**

ಚಾಸಾ-7 ರವರು ನನಗೆ ತಿಳಿಸಿದ್ದು ಏನೆಂದರೆ 1 ನೇ ಆರೋಪಿ ಪ್ರಾಸಾ-1 ರವರಿಗೆ ರಾಡಿನಿಂದ, 2 ನೇ ಆರೋಪಿ ಬಡಿಗೆಯಿಂದ ಮತ್ತು 3 ನೇ ಆರೋಪಿ ಕೈಯಿಂದ ಹೋಡೆದಿದ್ದಾರೆ ಮತ್ತು 4 ರಿಂದ 6 ನೇ ಆರೋಪಿತರು ಪ್ರಚೋದನೆ ನೀಡಿದ್ದಾರೆ ಎಂದು ನನಗೆ ತಿಳಿಸಿದ್ದಾರೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಬಿ.ಎಸ್. ವಕೀಲರಿಂದಃ-**

ಘಟನೆ ಬಗ್ಗೆ ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ನನ್ನ ಹೇಳಿಕೆಯನ್ನು ಪೋಲಿಸರು ನನಗೆ ಓದಿ ಹೇಳಿಲ್ಲ. ಚಾಸಾ-7 ರವರು ನನಗೆ ಯಾವುದೇ ವಿಷಯ ಹೇಳದೇ ಇದ್ದರು ಸಹ ಆರೋಪಿತರಿಗೆ ಸತಾಯಿಸಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಾತ್ರಿ 9 ಗಂಟೆಗೆ ಜಗಳ ಆದ ಬಗ್ಗೆ ಹೇಳಿದ್ದಿರಾ ಎಂದು ಪ್ರಶ್ನಿಸಿದಾಗ ಸಾಕ್ಷಿ ಸಮಯದ ಬಗ್ಗೆ ಹೇಳಿಲ್ಲ ಎಂದು ಹೇಳಿ ನಂತರ ಪುನಃ ರಾತ್ರಿ 8 ಗಂಟೆಗೆ ಜಗಳವಾಗಿದೆ ಎಂದು ತಿಳಿಸಿದ್ದಾರೆ ಎಂದು ನುಡಿಯುತ್ತಾರೆ. ಪ್ರಾಸಾ-1 ರವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ರಾಡಿನಿಂದ ಹೋಡೆದ ಬಗ್ಗೆ ಮತ್ತು 2 ನೇ ಆರೋಪಿ ಬಡಿಗೆಯಿಂದ ಹೋಡೆದ ಬಗ್ಗೆ ಮತ್ತು 3 ರಿಂದ 6 ನೇ ಆರೋಪಿ ಪ್ರಚೋದನೆ ನೀಡಿದ ಬಗ್ಗೆ ತಿಳಿಸಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿದಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲಾ**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**